### ಭಾರತದ ಪಕ್ಷಿಗಳ ಸ್ಥಿತಿ-ಗತಿ 2023 ವರದಿ ತಯಾರಿಕೆಯಲ್ಲಿ ಭಾಗವಹಿಸಿದ ಸಂಸ್ಥೆಗಳು

- ಅಶೋಕ ಟ್ರಸ್ಟ್ ಫಾರ್ ರಿಸರ್ಚ್ ಇನ್ ಎಕಾಲಜಿ ಅಂಡ್ ಎನ್ವಿರಾನ್‌ಮೆಂಟ್, ಬೆಂಗಳೂರು (ATREE)
- ಸೆಂಟರ್ ಫಾರ್ ಎಕೊಲಾಜಿಕಲ್ ಸೈನ್ಸಸ್, ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು (CESIISc)
- ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿ, ಮುಂಬಯಿ (BNHS)
- ಫೌಂಡೇಷನ್ ಫಾರ್ ಎಕೊಲಾಜಿಕಲ್ ಸೆಕ್ಯೂರಿಟಿ, ಗುಜರಾತ್ (FES)
- ನೇಚರ್ ಕನ್ಸರ್‌ವೇಷನ್ ಫೌಂಡೇಷನ್, ಮೈಸೂರು (NCF)
- ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ, ಚೆನ್ನೈ (NBA)
- ನ್ಯಾಷನಲ್ ಸೆಂಟರ್ ಫಾರ್ ಬಯಲಾಜಿಕಲ್ ಸೈನ್ಸಸ್, ಟಿಐಎಫ್‌ಆರ್, ಬೆಂಗಳೂರು (NCBSTIFR)
- ಸಲೀಂ ಅಲಿ ಸೆಂಟರ್ ಫಾರ್ ಆರ್ನಿತೊಲಾಜಿ ಅಂಡ್ ನ್ಯಾಚುರಲ್ ಹಿಸ್ಟರಿ, ಕೊಯಮತ್ತೂರು, ತಮಿಳುನಾಡು (SACON)
- ವೆಟ್‌ಲ್ಯಾಂಡ್ ಇಂಟರ್‌ನ್ಯಾಷನಲ್ ಸೌತ್ ಏಷ್ಯಾ, ನವದೆಹಲಿ (WISA)
- ವೈಲ್ಡ್‌ಲೈಫ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ, ಉತ್ತರಾಖಂಡ (WII)
- ವೈಲ್ಡ್‌ಲೈಫ್ ಟ್ರಸ್ಟ್ ಇಂಡಿಯಾ, ನೊಯ್ಡಾ (WTI)
- ವರ್ಲ್ಡ್‌ವೈಡ್ ಫಂಡ್ ಫಾರ್ ನೇಚರ್ ಇಂಡಿಯಾ, ನವದೆಹಲಿ (WWF-India)
- ಜುವಲಾಜಿಕಲ್ ಸರ್ವೆ ಆಫ್ ಇಂಡಿಯಾ, ಕೋಲ್ಕತ್ತ (ZSI)



ನಿಶಾಚರಿ ಮತ್ತು ಮಾಂಸ ತಿನ್ನುವ ಹಾಲಕ್ಕಿ

ಪರಿಣಾಮಗಳನ್ನು ಅಂದಾಜಿಸಲಾಗಿದೆ.

**ಸಂರಕ್ಷಣಾ ಕಾರ್ಯಯೋಜನೆಗೆ ಶಿಫಾರಸು:** ನಿರ್ದಿಷ್ಟ ಪಕ್ಷಿ ಪ್ರಭೇದ ಮತ್ತು ಪಕ್ಷಿ ಗುಂಪುಗಳಿಗೆ ಆದ್ಯತೆ ಮೇಲೆ ಕಾರ್ಯಯೋಜನೆ ಸಿದ್ಧಪಡಿಸುವುದು. ಆವಾಸಸ್ಥಾನಗಳ ಸಂರಕ್ಷಣೆ ಮತ್ತು ಹಕ್ಕಿಗಳಿಗೆ ಅನುಕೂಲವಾಗುವ ಆವಾಸಸ್ಥಾನಗಳ ಅಭಿವೃದ್ಧಿಗೆ ಮೊದಲ ಆದ್ಯತೆ ನೀಡಬೇಕಿದೆ. ರಾಜ್ಯಮಟ್ಟದಲ್ಲಿ ಜೀವವೈವಿಧ್ಯ ಸಂಶೋಧನೆ ನಡೆಯಬೇಕು. ಇದರಲ್ಲಿ ತರಬೇತಿ, ಕಾರ್ಯ ಯೋಜನೆಗಳು ಮತ್ತು ಸೂಕ್ತ ಅನುದಾನ ಇರಬೇಕು. ಭಾರತದ ನುರಿತ ತಜ್ಞರು ಮತ್ತು ಸ್ವಯಂ ಸೇವಕರನ್ನೊಳಗೊಂಡಂತೆ ನಿಗದಿತ ಸಮಯದಲ್ಲಿ ಪಕ್ಷಿ ಸಮೀಕ್ಷೆ ಮಾಡಿ ಮಾಹಿತಿ ದಾಖಲಿಸುವ ಅಗತ್ಯತೆಯಿದೆ. ಪಕ್ಷಿ ಸಂತತಿಯನ್ನು ಸಂರಕ್ಷಿಸಲು ಅನುಕೂಲವಾಗುವ ನಿಯಮಾವಳಿಗಳನ್ನು ತಯಾರಿಸಿ ಕಾಲಕಾಲಕ್ಕೆ ಮೌಲ್ಯಮಾಪನವಾಗಬೇಕು. ವನ್ಯಜೀವಿ ಸಂರಕ್ಷಣೆ ಕಾಯ್ದೆಯನ್ನು ಪೂರ್ಣವಾಗಿ ಅನುಷ್ಠಾನಗೊಳಿಸಬೇಕು. ಸಂರಕ್ಷಣಾ ಸಂಶೋಧನೆಗೆ ಒತ್ತು ನೀಡಿ ನಿಗದಿತ ಯೋಜನೆಗಳನ್ನು ಕಾರ್ಯರೂಪಕ್ಕೆ ತರಬೇಕು.



ಚಿತ್ರದುರ್ಗದ ಕೆರೆಯ ಕಲ್ಮಶಗಳ ನಡುವೆ ಆಹಾರ ಹುಡುಕುತ್ತಿರುವ ಬಣ್ಣದ ಕೊಕ್ಕರೆ

## ಮರೆಯಬಾರದ ಮಾತು

ಭಾರತದಲ್ಲಿ ಗುರುತಿಸಲಾದ ಒಟ್ಟು ಪಕ್ಷಿಪ್ರಭೇದಗಳ ಸಂಖ್ಯೆಯಲ್ಲಿ ಹಿಂದಿನ ವರದಿಗಿಂತ ಏರಿಕೆ ಕಂಡಿದೆ. ಇದು ಹೆಚ್ಚು ಪಕ್ಷಿವೀಕ್ಷಕರು ಪಾಲ್ಗೊಂಡು ವಿವಿಧ ಪ್ರದೇಶಗಳಲ್ಲಿ ಸರ್ವೇಕ್ಷಣೆ ಮಾಡಿರುವುದರಿಂದ ಸಾಧ್ಯವಾಗಿದೆ. ಆದರೆ ಇಳಿಮುಖವಾಗಿರುವ ಪಕ್ಷಿಗಳ ಸಂಖ್ಯೆ ಕಳವಳಕಾರಿ. ವೈಜ್ಞಾನಿಕವಾಗಿ ವಿಶ್ಲೇಷಣೆಯ ಆಧಾರದ ಮೇಲೆ ವರದಿಯಲ್ಲಿ ಪ್ರಕಟಗೊಂಡಿರುವ ಎಲ್ಲಾ ಅಂಶಗಳನ್ನು ಮನಗಂಡು ತುರ್ತಾಗಿ ಪ್ರಕೃತಿ ನಾಶವನ್ನು ತಡೆಗಟ್ಟಬೇಕಿದೆ. ಸುಸ್ಥಿರ ಯೋಜನೆಗಳ ಅನುಷ್ಠಾನ ಈ ಸಮಯದ ಬೇಡಿಕೆ. ಪರಿಸರದಲ್ಲಿನ ಕಲ್ಮಶಗಳನ್ನು ಗಣನೀಯ ಮಟ್ಟದಲ್ಲಿ ಇಳಿಕೆ ಮಾಡುವುದು ಸೇರಿದಂತೆ ಪರಿಸರಸ್ನೇಹಿ ಭೂಮಿಯನ್ನು ಸಂರಕ್ಷಿಸುವುದು ಎಲ್ಲಾ ಪ್ರಜ್ಞಾವಂತರ ಆಶಯ. ಇದರಿಂದ 'ಜೀವಿಸು, ಜೀವಿಸಲು ಬಿಡು' ಎಂಬುದಕ್ಕೆ ಮೌಲ್ಯ ನೀಡಿ ಆ ಮೂಲಕ ಮಾನವನ ಅಳಿವನ್ನು ಮುಂದೂಡಬಹುದೇನೋ?

ಪ್ರತಿಕ್ರಿಯಿಸಿ: feedback@sudha.co.in